ಕ್ರಿಯಾ ಯೋಜನೆ ರೂಪಿಸಿದೆ. ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಪ್ರಸ್ತಾವನೆಗಳನ್ನು ಕಳುಹಿಸಲು ಜಿಲ್ಲಾ ಸಮಿತಿಗಳಿಗೆ ತಿಳಿಸಲಾಗಿದೆ. ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಪಡೆದು ನಿಗಮದಿಂದ ಮಂಜೂರಾತಿ ನೀಡಲಾಗುವುದು.

1302(1670) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉದ್ಯೋಗ ಇಲಾಖೆಯ ಉಪ ನಿರ್ದೇಶಕರ ವಿರುದ್ಧ ಲೋಕಾಯುಕ್ತರು ಅಕ್ರಮ ಆಸ್ತಿ ಹಾಗೂ ಭ್ರಷ್ಟಾಚಾರ ಪ್ರಕರಣದ ಹಿನ್ನೆಲೆಯಲ್ಲಿ ಸೇವೆಯಿಂದ ವಜಾಗೊಳಿಸಲು ದಿ: 3.8.2005 ರಂದು ಶಿಫಾರಸ್ಸು ಮಾಡಿದಾಗ್ಯೂ, ಅವರ ವಿರುದ್ಧ ಕ್ರಮಕೈಗೊಳ್ಳದೆ ವಿಳಂಬ ನೀತಿ ಅನುಸರಿಸಿ ರಕ್ಷಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಹಾಗಿದ್ದಲ್ಲಿ, ಇವರನ್ನು ವಜಾ ಗೊಳಿಸದೇ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಇಲ್ಲಿಯವರೆಗೆ ಉಂಟಾದ ನಷ್ಟ ಎಷ್ಟು;

ಈ) ಈವರೆವಿಗೂ, ಲೋಕಾಯುಕ್ತರಿಂದ ಶಿಕ್ಷೆಗೆ ಶಿಫಾರಸ್ಸುಗೊಂಡಿದ್ದರೂ ಶಿಕ್ಷೆಗೊಳಗಾಗದೆ ನಿವೃತ್ತರಾದ ಅಧಿಕಾರಿಗಳ ಸಂಖ್ಯೆ ಎಷ್ಟು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಉಪಲೋಕಾಯುಕ್ತ ಇವರನ್ನು ಸೇವೆಯಿಂದ ವಜಾ ಮಾಡಲು ಶಿಫಾರಸ್ಸು ಮಾಡಿದೆ. ಈ ಪ್ರಕರಣವು ಪರಿಶೀಲನೆಯಲ್ಲಿದ್ದು ಅಂತಿಮ ಹಂತದಲ್ಲಿದೆ.

ಆ) ಉಪಲೋಕಾಯುಕ್ತರ ವಿಚಾರಣಾ ವರದಿ ಅವರ ಶಿಫಾರಸ್ಸಿನೊಂದಿಗೆ ದಿ: 6.8.2005 ರಂದು ಸ್ವೀಕರಿಸಿದೆ. ನಿಯಮಾನುಸರ 2ನೇ ಕಾರಣ ಕೇಳುವ ನೋಟೀಸನ್ನು ಮತ್ತು ವಿಚಾರಣಾ ವರದಿಯೊಂದಿಗೆ ಶ್ರೀ ಸಿ.ಎಲ್. ಕಿತ್ತೂರು, ಉಪನಿರ್ದೇಶಕರು ಮತ್ತು ಶ್ರೀಮತಿ ಖಿತೇಜ ಫೈರೋಜ್, ಉದ್ಯೋಗಾಧಿಕಾರಿ ಇವರಿಗೆ ದಿ: 26.11.2005ರಂದು ಜಾರಿ ಮಾಡಿದೆ. ಶ್ರೀಮತಿ ಖಿತೇಜ ಫೈರೋಜ್ ರವರಿಂದ ದಿ: 7.12.2005 ಮತ್ತು ಶ್ರೀ ಸಿ.ಎಲ್. ಕಿತ್ತೂರ್ ರವರಿಂದ ದಿ: 19.12.2005 ರಂದು ಉತ್ತರ ನೀಡಿರುತ್ತಾರೆ. ಇವರುಗಳ ಉತ್ತರದ ಆಧಾರದ ಮೇಲೆ ಈ ಪ್ರಕರಣವನ್ನು ಪರಿಶೀಲಿಸಲಾಗುತ್ತಿದೆ ಮತ್ತು ಪ್ರಕರಣ ಅಂತಿಮ ಹಂತದಲ್ಲಿದೆ.

ಇ) ಅನ್ವಯಿಸುವುದಿಲ್ಲ.

ಈ) ಇಲ್ಲ.